
# ದಧೀಚಿಯ ಬಲಿದಾನ

ಕಥೆ: ಸ್ವಾಮಿ ರಾಘವೇಶಾನಂದ ಚಿತ್ರ: ರಮಣಿ




ಇಂದ್ರನ ಕಿವಿಗೆ ಈ ವಿಷಯ ಬಿದ್ದದ್ದೇ ತಡ ಆತನು ಕ್ರುದ್ಧನಾಗಿ ದಧೀಚಿಯನ್ನು ಕೊಲ್ಲಲು ದೊಡ್ಡ ಕೊಡಲಿಯೊಂದನ್ನು ಬೀಸಿದನು.
5
ಆದರೆ ಮರುಕ್ಷಣವೇ ಅಶ್ವಿನೀಕುಮಾರರು ದಧೀಚಿಯನ್ನು ಬದುಕಿಸಿದರು.
6
ಪೂಜ್ಯರೇ ನಿಮ್ಮ ಆಶೀರ್ವಾದಕ್ಕಾಗಿ ನಾವು ಕಾದಿದ್ದೇವೆ. ತಾವು ಅನುಮತಿ ನೀಡಿದರೆ ನಾವು ಇಲ್ಲಿಂದ ತೆರಳುತ್ತೇವೆ.
ಭಗವಂತನ ಆಶೀರ್ವಾದ ಸದಾ ನಿಮ್ಮ ಮೇಲಿರಲಿ.
ಕೆಲವು ದಿನಗಳ ನಂತರ ಇಂದ್ರನ ಪದವಿಗೇ ಗಂಡಾಂತರ ಬಂದಿತು. ಇಂದ್ರನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಒಬ್ಬ ಮುನಿ ಯಾಗವನ್ನು ಕೈಗೊಂಡನು. ಯಾಗದ ಅಗ್ನಿಕುಂಡದ ಬೆಂಕಿಯ ಜ್ವಾಲೆಗಳಿಂದ ವೃತ್ರಾಸುರನೆಂಬ ರಾಕ್ಷಸನು ಹೊರಬಂದನು.
7
ನೀನು ಇಂದ್ರನನ್ನು ದೇವ ಲೋಕದಿಂದ ಹೊರಗಟ್ಟಿ ಅವನ ಸಿಂಹಾಸನವನ್ನು ಆಕ್ರಮಿಸಿಕೊ.
ದೇವತೆಗಳು ತಮ್ಮ ಆಯುಧಗಳನ್ನೆಲ್ಲ ಪ್ರಯೋಗಿಸಿ ವೃತ್ರನನ್ನು ಆಕ್ರಮಣ ಮಾಡಿದರು. ಆದರೆ ವೃತ್ರ ಅವರ ಆಯುಧಗಳೆಲ್ಲವನ್ನೂ ನುಂಗಿ ಇಂದ್ರನನ್ನು ಅಟ್ಟಿಸಿಕೊಂಡು ಹೋದನು.
8


ಕಂಗಾಲಾದ ಇಂದ್ರ ಬ್ರಹ್ಮನ ಬಳಿಗೆ ಓಡಿದನು.
9
ಪ್ರಭೋ! ನನ್ನನ್ನು ಕಾಪಾಡು.
ಬ್ರಹ್ಮನು ಪರಮಾತ್ಮನಾದ ವಿಷ್ಣುವನ್ನು
ಕುರಿತು ಪ್ರಾರ್ಥಿಸಿದನು. ಆಗ......
ನೀನು ವೃತ್ರಾಸುರನನ್ನು ಕೊಲ್ಲಲು
ದಧೀಚಿ ಮಹರ್ಷಿಯ ಮೂಳೆಗಳಿಂದ
ತಯಾರಿಸಿದ ಆಯುಧವೇ ಆಗಬೇಕು.
10
11
ಇಂದ್ರನು ದಧೀಚಿ ಮಹರ್ಷಿಗಳ ಮೊರೆಹೊಕ್ಕನು.
ಅವರನ್ನು ಕುರಿತು ಅಂಗಲಾಚುತ್ತಾ.....
ಪೂಜ್ಯರೇ, ನನ್ನ
ತಪ್ಪುಗಳನ್ನೆಲ್ಲ ಮನ್ನಿಸಿ,
ನನ್ನನ್ನು ಆಶೀರ್ವದಿಸಿ.
ಶತ್ರುಗಳೇ ಆಗಿದ್ದರೂ ಎಲ್ಲರಿಗೂ
ನೆರವು ನೀಡುವುದೇ ನಮ್ಮ ಧರ್ಮ.
ಹೇಳು, ನನ್ನಿಂದೇನಾಗಬೇಕಿದೆ?
ನನ್ನನ್ನು ಅಟ್ಟಿಸಿಕೊಂಡು ಬರುತ್ತಿರುವ
ವೃತ್ರಾಸುರನನ್ನು ಕೊಲ್ಲಲು ನಿಮ್ಮ
ಮೂಳೆಗಳಿಂದ ಮಾಡಲ್ಪಟ್ಟ ಆಯುಧದಿಂದ ಮಾತ್ರ ಸಾಧ್ಯ.
ಇವನು ತನ್ನ ಪದವಿಯನ್ನು ಉಳಿಸಿಕೊಳ್ಳಲು
ನನ್ನ ಪ್ರಾಣವನೇ ಕೇಳುತ್ತಿದ್ದಾನೆ. ಆದರೇನಂತೆ,
ಈ ದೇಹ ಎಂದಾದರೂ ಒಂದು ದಿನ
ಬಿದ್ದು ಹೋಗುವಂತಹದೇ.
ಇವನಿಗೆ ಇದರಿಂದ
ಉಪಯೋಗವಾಗುವ
ಹಾಗಿದ್ದರೆ ಮಾಡಿಕೊಳ್ಳಲಿ.
12


13
ಈ ಮುಂಚೆ ನನ್ನ ತಲೆಯನ್ನು ಕತ್ತರಿಸ ಬೇಕೆಂದಿದ್ದೆ. ಈಗ ನಿನಗೆ ನನ್ನ ಮೂಳೆಗಳು ಬೇಕು. ತೆಗೆದುಕೊಂಡು ಹೋಗು.
ಇಂದ್ರನು ನೋಡುತ್ತಿದ್ದಂತೆಯೇ ದಧೀಚಿಯು ತನ್ನ ಪ್ರಾಣ ವನ್ನು ತ್ಯಜಿಸಿದನು. ಕಾಡುಪ್ರಾಣಿಗಳು ಬಂದು ಆ ಶರೀರದ ಮಾಂಸವನ್ನೆಲ್ಲ ತಿಂದು ಹೋದವು.
14
ದೇವತೆಗಳ ಶಿಲ್ಪಿ ವಿಶ್ವಕರ್ಮನು ದಧೀಚಿಯ ಮೂಳೆಗಳಿಂದ ವಜ್ರಾಯುಧವನ್ನು ತಯಾರಿಸಿದನು. ಅದರಿಂದ ವೃತ್ರಾಸುರನ ಸಂಹಾರವಾಯಿತು. ಇಂದ್ರನು ಈ ರೀತಿ ತನ್ನ ಪದವಿಯನ್ನು ಉಳಿಸಿಕೊಂಡನು.
15
16
ಧಧೀಚಿ ಮಹರ್ಷಿಯು ಎಂತಹ ಮಹಾತ್ಮ! ತನ್ನ ಶತ್ರುವೇ ಆಗಿದ್ದರೂ ಅವನ ಹಿತಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟ ಅದ್ಭುತ ಚೇತನ!